# ಗ್ರೀಸ್‌ನ ಹೊಸ ತಾರೆ

ಕ್ರೀಡೆಗಳಲ್ಲೇ ಅತ್ಯಧಿಕ ದೈಹಿಕ ಕ್ಷಮತೆ ಮತ್ತು ಶಕ್ತಿಯನ್ನು ಬೇಡುವ ಆಟ ಟೆನಿಸ್. ಹಾಗಾಗಿ ಟೆನಿಸ್ ಆಟಗಾರರ ಅತ್ಯುತ್ತಮ ಸಾಧನೆ 30ರ ಹರೆಯದಲ್ಲೇ ಅಂತ್ಯವಾಗುವುದು ಹೆಚ್ಚು. 30ನ್ನೂ ದಾಟಿ ದೇಹದ ಕಸುವು ಮತ್ತು ಫಿಟ್‌ನೆಸ್ ಉಳಿಸಿಕೊಳ್ಳುವವರು ವಿಶ್ವಚಾಂಪಿಯನ್‌ಗಳಾಗಿ ದಾಖಲೆಗಳನ್ನು ಸಾಧಿಸುತ್ತಾರೆ. ರಫಾ ನಡಾಲ್, ರೋಜರ್ ಫೆಡರರ್, ಆ್ಯಂಡಿ ಮುರ್ರೆ, ಜೊಕೊವಿಕ್ ಮುಂತಾದ ಕೈಬೆರಳೆಣಿಕೆಯ ಚಾಂಪಿಯನ್ನರು 30 ದಾಟಿದ ಬಳಿಕವೂ ಗ್ರ್ಯಾನ್‌ಸ್ಲಾಮ್ ವಿಜಯಿಗಳಾಗಿ ಉಳಿದುಕೊಂಡಿದ್ದಾರೆ. 20ರ ಹರೆಯ ಇಲ್ಲಿ ಮೇರುಸಾಧನೆಗೆ ಅಚ್ಚುಮೆಚ್ಚಿನ ವಯಸ್ಸು. ಆದರೆ 17ರ ಹರೆಯದಲ್ಲೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದು ಅಚ್ಚರಿ ಹುಟ್ಟಿಸಿದವರೂ ಕೆಲವರಿದ್ದಾರೆ. ಮ್ಯಾಟ್ಸ್ ವಿಲಾಂಡರ್, ಬೋರ್ನ್ ಬೋರ್ಗ್, ಬೋರಿಸ್ ಬೆಕರ್, ಮೈಕೆಲ್ ಚಾಂಗ್, ರಫಾ ನಡಾಲ್ ಈ ಸಾಲಿನಲ್ಲಿ ಎದ್ದು ಕಾಣಿಸುತ್ತಾರೆ. ಚಾಂಗ್, ಬೆಕರ್, ವಿಲಾಂಡರ್ 17ರ ಹರೆಯದಲ್ಲೇ ಗೆದ್ದರೆ, ಬೋರ್ಗ್ 18ರಲ್ಲಿ ಮತ್ತು ನಡಾಲ್ 19ರ ಹರೆಯದಲ್ಲಿ ಗೆದ್ದವರು.



ಇಷ್ಟೆಲ್ಲ ವಿವರಗಳನ್ನು ಈ ವಾರ ನೆನಪಿಸಿದಾತ ಗ್ರೀಸ್‌ನ 20ರ ಹರೆಯದ ಟೆನಿಸಿಗ ಸ್ಟೆಫನೆಸ್ ಟಿಟ್ಸಿಪಾಸ್. ಕಳೆದ ವಾರ ನಡೆದ ಆಸ್ಟ್ರೇಲಿಯನ್ ಓಪನ್ ಟೆನಿಸ್‌ನಲ್ಲಿ 15ನೇ ಸೀಡ್ ಆಟಗಾರನಾಗಿದ್ದ ಈತ, ಘಟಾನುಘಟಿಗಳನ್ನು ಸೋಲಿಸಿ ಸೆಮಿಫೈನಲ್‌ವರೆಗೆ ತಲುಪಿದ. ಸೆಮಿಫೈನಲ್‌ನಲ್ಲಿ ರಫಾ ಕೈಯಲ್ಲಿ ಸೋಲುಂಡರೂ, ಈತ ಈ ಟೂರ್ನಿಯಲ್ಲಿ ಜಗತ್ತಿನಾದ್ಯಂತ ಹೊಸ ಸಂಚಲನವನ್ನು ಮೂಡಿಸಿ ಸುದ್ದಿ ಮಾಡಿದ್ದಾನೆ. ಅದಕ್ಕೆ ಕಾರಣ 3ನೇ ರೌಂಡ್‌ನಲ್ಲಿ ಟೆನಿಸ್‌ನಲ್ಲಿ ತನ್ನ ಆರಾಧ್ಯದೈವ ಎಂದುಕೊಂಡಿದ್ದ 3ನೇ ಸೀಡ್ ರೋಜರ್ ಫೆಡರರ್‌ನನ್ನು ನಾಲ್ಕು ಸೆಟ್‌ಗಳಲ್ಲಿ ಸೋಲಿಸಿದ ಆಟ. ಟಿಟ್ಸಿಪಾಸ್‌ನ ಈ ಗೆಲುವಿಗೆ ಯೌವನದ ಕಸುವು ಮಾತ್ರ ಕಾರಣವಲ್ಲ. ಬದಲಾಗಿ ಮಾನಸಿಕ ದೃಢತೆ ಮತ್ತು ಹೊಸ ಶೈಲಿ ಆಟವೂ ಕಾರಣ. ಇತ್ತೀಚಿನ ವರ್ಷಗಳಲ್ಲಿ ರಷ್ಯನ್ ಮಾದರಿಯ ತರಬೇತಿ ಪಡೆದ ಹಲವು ಆಟಗಾರರು ಸಿಂಗಲ್ಸ್ ಪಂದ್ಯಗಳಲ್ಲಿ ಮಿಂಚುತ್ತಿದ್ದಾರೆ. ಈತ ಕೂಡಾ ರಷ್ಯನ್ ಮಾದರಿಯ ತರಬೇತಿ ಪಡೆದಾತ. ತಂದೆ ಗ್ರೀಕ್ ಮತ್ತು ತಾಯಿ ರಷ್ಯನ್. ಇಬ್ಬರೂ ಅನುಭವೀ ಟೆನಿಸ್ ಆಟಗಾರರು. ಅದರಲ್ಲೂ ತಾಯಿ ಜೂಲಿಯಾ ಅಪೊಸ್ಟೊಲಿ ಒಂದು ಕಾಲದಲ್ಲಿ ಜೂನಿಯರ್ ಟೆನಿಸ್ ವಿಶ್ವ ಚಾಂಪಿಯನ್ ಆಗಿದ್ದಾಕೆ. 3ನೇ ವಯಸ್ಸಿನಲ್ಲೇ ಅಪ್ಪನ ಜೊತೆ ಟೆನಿಸ್ ಆಡತೊಡಗಿದ ಸ್ಟೆಫನೆಸ್ ಟಿಟ್ಸಿಪಾಸ್, ಈ ವರ್ಷದ ಆರಂಭದಲ್ಲಿ ಫೆಡರರ್‌ನನ್ನು ಸೋಲಿಸಿ ಟೆನಿಸ್ ಜಗತ್ತಿನ ಅತಿರಥ ಮಹಾರಥರ ಗಮನ ಸೆಳೆದಿದ್ದಾನೆ. ಈ ವರ್ಷ ಈತ ಇನ್ನಷ್ಟು ಎತ್ತರಕ್ಕೇರುವ ನಿರೀಕ್ಷೆ ಹುಟ್ಟಿಸಿದ್ದಾನೆ.

ತಂದೆ ತಾಯಿ ಮಾತ್ರವಲ್ಲ, ಇಬ್ಬರು ಕಿರಿಯ ಸೋದರರು ಮತ್ತು ತಂಗಿ ಕೂಡಾ ಟೆನಿಸ್ ಆಟಗಾರರೇ. ತಂದೆ– ತಾಯಿಯ ಮಾರ್ಗದರ್ಶನದಲ್ಲಿ 14ರ ಹರೆಯದಲ್ಲಿ ಐಟಿಎಫ್ ಜೂನಿಯರ್ ಸರ್ಕಿಟ್‌ಗಳಲ್ಲಿ ಆಟವಾಡತೊಡಗಿದ ಈತ ವಿಂಬಲ್ಡನ್ ಜೂನಿಯರ್ ಡಬಲ್ಸ್‌ನಲ್ಲಿ ಪ್ರಶಸ್ತಿ ಗೆದ್ದಿದ್ದ. ಯೂರೋಪಿಯನ್ ಜೂನಿಯರ್ ಚಾಂಪಿಯನ್ ಆಗಿದ್ದ.

ಎಲ್ಲ ರೀತಿಯ ಅಂಕಣಗಳಲ್ಲೂ ಆಟವಾಡುವ ಟಿಟ್ಸಿಪಾಸ್, ಗ್ರಾಸ್‌ಕೋರ್ಟ್ ತನಗೆ ಅಚ್ಚುಮೆಚ್ಚು ಅಂದಿದ್ದಾನೆ. ಅಂದರೆ ಆತನ ಕಣ್ಣು ವಿಂಬಲ್ಡನ್ ಮೇಲೆ ನೆಟ್ಟಿದೆ. ಹಾಗೆ ನೋಡಿದರೆ ಈತ ಬಾಲ್ಯದಿಂದ ಹೆಚ್ಚಾಗಿ ಆಟವಾಡುತ್ತಿರುವುದು ಆವೆಮಣ್ಣಿನ ಅಂಕಣದಲ್ಲಿ. ಆಸ್ಟ್ರೇಲಿಯನ್ ಓಪನ್‌ನಲ್ಲಿ ಅತ್ಯುತ್ತಮ ಸಾಧನೆ ಮೆರೆಯಲು ಬಹುಶಃ ಇದೇ ಕಾರಣ ಎನ್ನಬಹುದು. ಈತ ಆಕ್ರಮಣಕಾರಿ ಬೇಸ್‌ಲೈನ್ ಆಟಗಾರ. ಆದರೆ ಇತರ ಬೇಸ್‌ಲೈನ್ ಆಟಗಾರರಿಗಿಂತ ಒಂದು ಭಿನ್ನತೆಯಿದೆ. ಬೇಸ್‌ಲೈನ್ ಆಟವಾಡುತ್ತಲೇ ಪದೇ ಪದೇ ನೆಟ್ ಬಳಿಗೆ ಬರುವ ಈತನ ಸಾಮರ್ಥ್ಯ ಅಚ್ಚರಿ ಹುಟ್ಟಿಸುವಂತಿದೆ. ಶಕ್ತಿಶಾಲಿ ಗ್ರೌಂಡ್‌ಸ್ಟ್ರೋಕ್ ಮತ್ತು ಮುಂಗೈಹೊಡೆತ ಈತನ ಆಟಕ್ಕೆ ಹೊಳಪು ನೀಡಿದೆ. ಅದಕ್ಕಿಂತ ಮುಖ್ಯವಾಗಿ ಒಂದೇ ಕೈ ಬಳಸಿ ಈತ ನೀಡುವ ಬ್ಯಾಕ್‌ಹ್ಯಾಂಡ್ ಹೊಡೆತಗಳು ಪ್ರೇಕ್ಷಕರ ಅಚ್ಚುಮೆಚ್ಚು. ಇದು ರೋಜರ್ ಫೆಡರರ್ ಮಾದರಿ. ಎಂತಹ ಒತ್ತಡದ ಸ್ಥಿತಿಯಲ್ಲೂ ಕೂಲ್ ಆಗಿ ಆಟವಾಡುವುದು ಫೆಡರರ್‌ನ ಇನ್ನೊಂದು ವೈಶಿಷ್ಟ್ಯ. ಅದೇ ಮಾದರಿಯನ್ನು ಟಿಟ್ಸಿಪಾಸ್ ಕೂಡಾ ಅನುಸರಿಸುತ್ತಿದ್ದಾನೆ. ಆದರೆ ಕ್ರೀಡಾವಿಮರ್ಶಕರ ಪ್ರಕಾರ, ಈತನ ಒಟ್ಟು ಆಟ ಬೋರ್ನ್ ಬೋರ್ಗ್ ಆಟದ ಶೈಲಿಯನ್ನು ಹೋಲುತ್ತದೆ.

ಇನ್ನೂ 20ರ ಹರೆಯದ ಟಿಟ್ಸಿಪಾಸ್. 6 ಅಡಿ 4 ಇಂಚು ಎತ್ತರದ ನೀಳಕಾಯ ಹೊಂದಿದ್ದಾನೆ. ಈತ ಸರ್ವ್‌ಗಳ ವೇಗ ಬೆರಗು ಹುಟ್ಟಿಸುವಂತಿದೆ. 2016ರಲ್ಲಷ್ಟೇ ವೃತ್ತಿಪರ ಆಟಗಾರನಾದ ಈತ, ಕೇವಲ ಎರಡೂವರೆ ವರ್ಷಗಳಲ್ಲೇ ಘಟಾನುಘಟಿ ಆಟಗಾರರ ಎದೆಯಲ್ಲಿ ಚಳಕು ಮೂಡಿಸಿರುವುದು ಕುತೂಹಲಕರ. ಕಳೆದ ವರ್ಷ ಯುಎಸ್ ಓಪನ್, ಫ್ರೆಂಚ್ ಓಪನ್ ಟೂರ್ನಿಗಳಲ್ಲಿ ಎರಡನೇ ರೌಂಡ್ ಪ್ರವೇಶಿಸಿದ್ದ ಟಿಟ್ಸಿಪಾಸ್. ವಿಂಬಲ್ಡನ್‌ನಲ್ಲಿ ನಾಲ್ಕನೇ ರೌಂಡ್ ತಲುಪಿದ್ದ. ಕಳೆದ ವರ್ಷ ನಾಲ್ಕು ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಸಹಿತ ಭಾಗವಹಿಸಿದ ಎಲ್ಲ ಎಂಟು ಟೂರ್ನಿಗಳಲ್ಲೂ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದ ಈತ ಈ ವರ್ಷದ ಕೊನೆಯೊಳಗೆ ಯಾವುದಾದರೊಂದು ಗ್ರ್ಯಾನ್‌ಸ್ಲಾಮ್‌ನಲ್ಲಿ ಫೈನಲ್ ಬಂದರೂ ಅಚ್ಚರಿಯಿಲ್ಲ.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65